# ಗಾಂಧಿನಗರ ಪೋಸ್ಟ್

## ದಳಪತಿಯ ಪ್ರೇಮಪರ್ವ

ಯುವಜನರ ನಾಡಿಮಿಡಿತಕ್ಕೆ ತಕ್ಕಂತೆ ಸಿನಿಮಾಗಳನ್ನು ರೂಪಿಸಲು ಪ್ರಯತ್ನಿಸುವ ನಿರ್ದೇಶಕ ಪ್ರಶಾಂತ್ ರಾಜ್ ಅವರ 'ದಳಪತಿ' ಈಗ ತೆರೆಗೆ ಸಿದ್ಧವಾಗಿದೆ (ಏ. 13ಕ್ಕೆ ತೆರೆಗೆ). 2014ರಲ್ಲಿ ಸೆಟ್ಟೇರಿದ ಈ ಸಿನಿಮಾ ವಿವಿಧ ಕಾರಣಗಳಿಂದ ನೆನೆಗುದಿಗೆ ಬಿದ್ದಿದ್ದು, ಕೊನೆಗೂ ಬಿಡುಗಡೆಯ ಭಾಗ್ಯ ಕಾಣುತ್ತಿದೆ.

ಲವಲವಿಕೆಯ ಹಾಗೂ ವರ್ಣರಂಜಿತ ದೃಶ್ಯಗಳ ಹೆಣಿಗೆ ಪ್ರಶಾಂತ್ ಸಿನಿಮಾಗಳ ವಿಶೇಷ. ಅವರ ಹಿಂದಿನ ಚಿತ್ರಗಳಾದ 'ಗಾನಬಜಾನ', 'ಲವ್‌ಗುರು', 'ಜೂಮ್'ಗಳಂತೆ 'ದಳಪತಿ' ಕೂಡ ಅದ್ದೂರಿಯಾಗಿ ಹಾಗೂ ವರ್ಣರಂಜಿತವಾಗಿ ಮೂಡಿಬಂದಿದೆಯಂತೆ. ಕ್ಲಾಸ್ ಅಥವಾ ಮಾಸ್ ಎನ್ನುವ ಗಡಿರೇಖೆಯಿಲ್ಲದೆ, ಎಲ್ಲ ವರ್ಗದ ಜನರು ನೋಡಿ ಆನಂದಿಸಬಹುದಾದ ಸಿನಿಮಾ ಇದು ಎನ್ನುವುದು ನಿರ್ದೇಶಕರ ಬಣ್ಣನೆ.

ಪ್ರೇಮ್ ಹಾಗೂ ಕೃತಿ ಕರಬಂಧ ಚಿತ್ರದ ನಾಯಕ–ನಾಯಕಿ. ನವಿರು ಪ್ರೇಮದ ಮಾರ್ದವ ಕಥನಗಳ ಮೂಲಕ ಗುರ್ತಿಸಿಕೊಂಡಿರುವ ಪ್ರೇಮ್ 'ದಳಪತಿ'ಯಲ್ಲಿ ಹೊಸತೇ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ನಾಲ್ಕು ಸಾಹಸದೃಶ್ಯಗಳಲ್ಲಿ ಅವರು ಭಾಗವಹಿಸಿದ್ದು, ಈ ದೃಶ್ಯಗಳು ಸಿನಿಮಾದ ವಿಶೇಷ ಆಕರ್ಷಣೆಯಾಗಿವೆ ಎನ್ನುವ ಅನಿಸಿಕೆ ಅವರದು. ಕೃತಿ ಅವರಿಗೂ ಚಿತ್ರದಲ್ಲಿನ ತಮ್ಮ ಪಾತ್ರ ಖುಷಿ ಕೊಟ್ಟಿದೆ. ಗ್ರಾಮೀಣ ಸೊಗಡಿನ ಸಿಂಪಲ್ ಹುಡುಗಿಯ ಪಾತ್ರ, ನಟಿಯಾಗಿ ಏಕತಾನತೆಯಿಂದ ಹೊರಬಂದಿರುವ ಅನುಭವವನ್ನು ಅವರಿಗೆ ಉಂಟು ಮಾಡಿದೆ.

ಪದ್ಮಜಾ ರಾವ್, ಚಿಕ್ಕಣ್ಣ ಹಾಗೂ ಶರತ್ ಲೋಹಿತಾಶ್ವ ತಾರಾಗಣದಲ್ಲಿರುವ ಪ್ರಮುಖರು. ಸಂತೋಷ್ ರೈ ಪಾತಾಜೆ ಛಾಯಾಗ್ರಹಣ ಹಾಗೂ ಚರಣ್ ರಾಜ್ ಸಂಗೀತ ಚಿತ್ರಕ್ಕಿದೆ.





## ಬಾನು-ಬುವಿಯ ನಡುವೆ

ಆಕಾಶ ಮತ್ತು ಭೂಮಿಯ ನಡುವಣ ಪ್ರೇಮಪ್ರಸಂಗ ಹೇಗಿರುತ್ತದೆ? ಉತ್ತರಕ್ಕಾಗಿ ನಮ್ಮ ಚಿತ್ರವನ್ನು ನಿರೀಕ್ಷಿಸಿ ಎನ್ನುತ್ತಾರೆ 'ಬಾನು ವೆಡ್ಸ್ ಭೂಮಿ' ನಿರ್ದೇಶಕ ಜೆ.ಕೆ. ಆದಿ. ಹಾಗೆಂದು ನಿರ್ದೇಶಕರೇನು ಅಲೌಕಿಕ ಕಥೆಯನ್ನು ಹೇಳಲು ಹೊರಟಿಲ್ಲ. ಪ್ರೇಮದ ಎರಡು ಧ್ರುವಗಳನ್ನು ರೂಪಕವಾಗಿ ಬಳಸಿಕೊಂಡು ಅವರು ಚಿತ್ರಕಥೆ ರೂಪಿಸಿದ್ದಾರೆ.

ದಿನೇಶ್‌ಬಾಬು ಹಾಗೂ ಎಸ್. ನಾರಾಯಣ್ ಜೊತೆ ಕೆಲಸ ಮಾಡಿದ ಅನುಭವ ಹೊಂದಿರುವ ಆದಿ ಅವರಿಗೆ, ತಾವು ಹೇಳಲಿರುವ ಕಥೆ ಚರ್ವಿತ ಚರ್ವಣ ಆಗಬಾರದೆನ್ನುವ ಹಂಬಲವಿದೆ. ಹಾಗಾಗಿಯೇ ಚಿತ್ರಕಥೆ ರೂಪಿಸುವಲ್ಲಿ ಸಾಕಷ್ಟು ಎಚ್ಚರವಹಿಸಿದ್ದಾರಂತೆ. ಬೆಂಗಳೂರು, ಮೈಸೂರು, ಕೊಡಗು, ಸಕಲೇಶಪುರ, ಕಾರವಾರ ಹಾಗೂ ಶಿವಮೊಗ್ಗಗಳಲ್ಲಿ ಸಿನಿಮಾದ ಚಿತ್ರೀಕರಣ ನಡೆಯಲಿದೆ.

ಸೂರ್ಯಪ್ರಭು ಚಿತ್ರದ ನಾಯಕ. ನರಗುಂದ ಮೂಲದವರಾದ ಅವರು ಕೈತುಂಬಾ ಸಂಬಳ ಬರುತ್ತಿದ್ದ ನೌಕರಿಗೆ ಬೆನ್ನುಹಾಕಿ ಸಿನಿಮಾ ನಟನಾಗಲು ಹೊರಟಿದ್ದಾರೆ. ನಟನಾಗುವುದು ನನ್ನ ಮಹತ್ವಾಕಾಂಕ್ಷೆ ಎನ್ನುವ ಅವರು, ನಿರ್ದೇಶಕರ ಗರಡಿಯಲ್ಲಿ ನಟನೆಯ ಪ್ರಾಥಮಿಕ ಅಂಶಗಳನ್ನು ಕಲಿತುಕೊಂಡಿದ್ದಾರೆ. ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿರುವ ರಿಷಿತಾ ಮಲ್ನಾಡ್ ಈಗಾಗಲೇ ಮೂರು ಸಿನಿಮಾಗಳಲ್ಲಿ ನಟಿಸಿದ್ದಾರೆ. ಬೆಂಗಳೂರಿನ ಹುಡುಗಿ ಮೈಸೂರಿಗೆ ಹೋಗಿ ಪ್ರೇಮದಲ್ಲಿ ಬೀಳುವ ಪಾತ್ರ ಅವರದು. ಅನುಭವಿ ನಟ ಶೋಭರಾಜ್ ಪ್ರಮುಖ ಪಾತ್ರವೊಂದಲ್ಲಿ ನಟಿಸುತ್ತಿದ್ದಾರೆ.

■ ರಘು